ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಪುನ:ಶ್ಚೇತನ

2681 (3551) ಶ್ರೀ ಡಿ.ಆರ್. ಪಾಟೀಲ್ (ಗದಗ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳು ಎಷ್ಟು; ಜಿಲ್ಲಾವಾರು ಮಾಹಿತಿ ಒದಗಿಸುವುದು;

ಆ) ಇವುಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ;

ಇ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡಬೇಕಾದ ಹಾಗೂ ಬಾಕಿ ಇರುವ ಸಹಾಯಧನ ಎಷ್ಟು; ಈ ಸಹಾಯಧನ ಎಷ್ಟು ಕಾಲದಿಂದ ಬಾಕಿ ಇದೆ.

ಈ) ಈ ಸಹಾಯಧನವನ್ನು ಕೈಗಾರಿಕೆಗಳಿಗೆ ಕಾಲಮಿತಿಗೊಳಪಟ್ಟು ವಿತರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ಟೆಕ್ಸಾಕ್‌ನವರು 1998 ರಲ್ಲಿ ನಡೆಸಿದ ಮಾದರಿ ಸಮೀಕ್ಷೆ ವರದಿಯ ಪ್ರಕಾರ ಶೇ.5.41 ರಷ್ಟು ಘಟಕಗಳು ರೋಗಗ್ರಸ್ತವಾಗಿರುತ್ತವೆ. ಶೇ.15.64ರಷ್ಟು ಘಟಕಗಳು ರೋಗಗ್ರಸ್ಥವಾಗುವ ಸ್ಥಿತಿಯಲ್ಲಿರುವುದಾಗಿಯೂ, ಶೇ.28.95ರಷ್ಟು ಘಟಕಗಳು ಮುಚ್ಚಿರುವುದಾಗಿಯೂ ತಿಳಿದು ಬಂದಿದೆ, (ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ.) ಇತ್ತೀಚೆಗೆ ಭಾರತ ಸರ್ಕಾರದ ವತಿಯಿಂದ ನಡೆಸಲಾಗಿರುವ 6739 ಸಣ್ಣ ಕೈಗಾರಿಕಾ ಘಟಕಗಳ ಸಮೀಕ್ಷೆ ಪ್ರಕಾರ 3360 ಘಟಕಗಳು ಮುಚ್ಚಿರುವುದಾಗಿ ತಿಳಿದು ಬಂದಿದೆ. ಇದರಿಂದಾಗಿ ಸುಮಾರು ಶೇಕಡಾ 50 ರಷ್ಟು ಘಟಕಗಳು ಕಾರ್ಯನಿರತವಾಗಿಲ್ಲದಿರುವುದು ತಿಳಿದು ಬಂದಿದೆ.

ಆ) ರಾಜ್ಯದಲ್ಲಿರುವ ರೋಗಗ್ರಸ್ತ ಕೈಗಾರಿಕೆಗಳನ್ನು ಪುನ:ಶ್ಚೇತನಗೊಳಿಸಲು 1986 ರಿಂದಲೂ ಪ್ರತ್ಯೇಕ ನೀತಿಗಳನ್ನು ಆಗಿಂದಾಗ್ಗೆ ರೂಪಿಸುತ್ತಾ ಬಂದಿದೆ. ರಾಜ್ಯದಲ್ಲಿ ರೋಗಗ್ರಸ್ತ ಕೈಗಾರಿಕೆಗಳ ಪುನ:ಶ್ಚೇತನಕ್ಕಾಗಿ 2001 ರಲ್ಲಿ ಘೋಷಿಸಿರುವ ಹೊಸ ಕೈಗಾರಿಕಾ ನೀತಿಯ ಪ್ರಕಾರ ರೋಗಗ್ರಸ್ತ ಕೈಗಾರಿಕೆಗಳಿಗೆ ಕೆಳಕಂಡ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಬಡ್ಡಿರಹಿತ ಬೀಜಧನ ಸಾಲ ರೂ.2.50 ಲಕ್ಷ ಯೋಜನಾ ವೆಚ್ಚದ ಶೇ.25 ರಷ್ಟು.
2) ಕೆಪಿಟಿಎಲ್‌ನಿಂದ ಘಟಕವು ಮುಚ್ಚಿದ ಅವಧಿಯಲ್ಲಿ ಯಾವುದೇ ನಿಗಧಿತ ಧರ ಹಾಗೂ ಬೇಡಿಕೆ ಧನ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

3) ವಿದ್ಯುತ್ ಬಿಲ್ಲಿನ ಬಾಕಿ ಪಾವತಿಯನ್ನು ಶೇ. ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

4) ಮಾರಾಟ ತೆರಿಗೆಯ ಬಾಕಿ ಪಾವತಿಸುವಲ್ಲಿ ಶೇ. ಅರ್ಧದಷ್ಟು ಬಡ್ಡಿಯೊಡನೆ 6 ಅರ್ಧವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

5) ಕೆಐಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ಲೆಕ್ಕ ಹಾಕದಿರುವುದು.

6) ಮುಂದಿನ ಅವಧಿಗೆ ಪಾವತಿ ಮಾಡಬೇಕಾದ ತೆರಿಗೆಗಳನ್ನು ಬಡ್ಡಿ ಇಲ್ಲದೇ ಪಾವತಿಸಲು ಮೂರು ವರ್ಷಗಳವರೆಗೆ ಅವಕಾಶ.

ಇ) 31-3-2001ರ ಅಂತ್ಯಕ್ಕೆ ರೂ. 338.57 ಕೋಟಿ ಸಹಾಯಧನ ಬಿಡುಗಡೆ ಬಾಕಿಯಿದ್ದು ಈ ವರ್ಷ 10.00 ಕೋಟಿ ಬಿಡುಗಡೆಯಾಗಿದೆ. 328.57 ಬಾಕಿಯಿತ್ತು.

ಈ) ಈ ವರ್ಷದ ಆಯವ್ಯಯದಲ್ಲಿ ರೂ.25.00 ಕೋಟಿ ಹಣವನ್ನು ಸಹಾಯಧನದ ಬಿಡುಗಡೆಗಾಗಿ ನಿಗಧಿಪಡಿಸಲಾಗಿದೆ. ಇದರಲ್ಲಿ ಈಗಾಗಲೇ ರೂ.10.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ ರೂ.15.00 ಕೋಟಿಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು. ಪೂರ್ಣ ಸಹಾಯಧನ ಬಾಕಿಯನ್ನು ಬಿಡುಗಡೆ ಮಾಡಲು ಸರ್ಕಾರವು ಬಾಂಡ್ ಮೂಲಕ ವಿತರಣೆಯನ್ನು ಮಾಡಲು ಯೋಚಿಸಿದೆ. ಈಗ ಎಸ್.ಬಿ.ಐ. ಕ್ಯಾಪಿಟಲ್ ಮಾರ್ಕೆಟ್‌ದವರು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ನವೋದಯ ಶಾಲೆಯಲ್ಲಿ ಅವ್ಯವಸ್ಥೆ

2682 (3056) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳ್ತಂಗಡಿ ತಾಲ್ಲೂಕು ಮುಂದಾಜಿ ನವೋದಯ ಮಾದರಿ ವಸತಿ ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳಾದ ನೀರಿನ ವ್ಯವಸ್ಥೆ, ದೂರವಾಣಿ, ಪೀಠೋಪಕರಣಗಳು ಮತ್ತಿತರ ಸೌಲಭ್ಯಗಳು ಇಲ್ಲದೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಕುರಿತು ಕೈಗೊಂಡ ಕ್ರಮಗಳೇನು?

ಆ) ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗಾಗಿ ಒದಗಿಸಲಾಗಿರುವ ವ್ಯವಸ್ಥೆಯ ವಿವರಗಳೇನು?

ಇ) ಈ ವಸತಿ ಶಾಲೆಗೆ ಒದಗಿಸಲಾಗಿರುವ ಒಟ್ಟು ವಿವಿಧ ವರ್ಗದ ಸಿಬ್ಬಂದಿಗಳ ವಿವರಗಳೇನು? ಮಂಜೂರಾದ ಹುದ್ದೆಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ? ಅವುಗಳನ್ನು ಎಂದು ಭರ್ತಿ ಮಾಡಲಾಗುವುದು?